ನೋಡಿದರು. ಕನ್ನಡ ಸಂವೇದನೆಯೂ ಸಹ ಇದಕ್ಕೆ ಹೊರತಲ್ಲ. ಕುವೆಂಪು, ಬೇಂದ್ರೆ, ಪುತಿನ ಇವರೆಲ್ಲಾ ಅಂಬೇಡ್ಕರ್ ಅವರ ಹೋರಾಟಗಳನ್ನು ಬಲ್ಲವರೇ; ಗಾಂಧೀಜಿಗೆ ಮತ್ತು ರಾಷ್ಟ್ರೀಯ ಕಾಂಗ್ರೆಸ್‌ಗೆ ವಿರುದ್ಧವಾದ ಭಿನ್ನಧ್ವನಿ ಅಂಬೇಡ್ಕರ್ ಅವರದು ಇದೆ ಎಂಬ ವಿಚಾರ ಅವರಿಗೆಲ್ಲಾ ಗೊತ್ತಿದ್ದ ವಿಷಯವೇ.

ಅಂಬೇಡ್ಕರ್ ಅವರ ವಿಚಾರಗಳು ಮುನ್ನೆಲೆಗೆ ಬರದಂತೆ ಆಗಿನ ಕಾಂಗ್ರೆಸ್ ನೋಡಿಕೊಂಡಿದ್ದರಿಂದ ಕನ್ನಡದ ಲೇಖಕರು ಅಂಬೇಡ್ಕರ್ ಅವರ ಹೆಸರನ್ನು ಹೇಳಲೇ ಇಲ್ಲ. ಆದರೆ ಅಂಬೇಡ್ಕರ್ ಅವರ ವಿಚಾರಗಳು ಕನ್ನಡ ಸಂವೇದನೆಯಲ್ಲಿ ಇವೆ. ವಸಾಹಾತುಶಾಹಿ ಸಂದರ್ಭದ ಕನ್ನಡ ಸಾಹಿತ್ಯ ಕೃತಿಗಳಲ್ಲಿ ವರ್ಣ–ವರ್ಗ ಸಂಘರ್ಷ, ಜಾತೀಯತೆಯ ವಿರುದ್ಧದ ಧ್ವನಿ, ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯುವಿಕೆ ಮುಂತಾದ ಸಮಾನತಾ ಸಮಾಜದ ಸ್ಥಾಪನೆಯ ಕನಸನ್ನು ಕಾಣುವ ವಿವರಗಳನ್ನು ಕಾಣಬಹುದು. ಇವೆಲ್ಲವೂ ಅಂಬೇಡ್ಕರ್ ಅವರ ವಿಚಾರಧಾರೆಗಳೇ ಆಗಿವೆ.

ಇದನ್ನು ಮತ್ತಷ್ಟು ಸ್ಪಷ್ಟಪಡಿಸಿಕೊಳ್ಳಬಹುದು. ಮೈಸೂರು ರಾಜ್ಯದಲ್ಲಿ 1910ರಲ್ಲಿ ಸರ್ಕಾರದಲ್ಲಿ ಬ್ರಾಹ್ಮಣರ ಸ್ಥಾನಮಾನ ಕುರಿತು ಪ್ರಶ್ನಿಸುವ ಗುಂಪೊಂದು ಹುಟ್ಟಿಕೊಂಡಿತು. ಅದೇ ಮುಂದೆ 1917ರ ಪ್ರಜಾಮಿತ್ರ ಮಂಡಳಿಯಾಗಿ ರೂಪತಾಳಿತು. 1930ರಲ್ಲಿ ಕಾಂಗ್ರೆಸ್ ಪಕ್ಷ ಮೈಸೂರು ರಾಜ್ಯದಲ್ಲಿ ಸ್ಥಾಪನೆಯಾಯಿತು. ಇದರಲ್ಲಿ ಅಸ್ಪೃಶ್ಯರು ಯಾರೂ ಇರಲಿಲ್ಲ. ಆದರೆ ಅಸ್ಪೃಶ್ಯರ ಸ್ಥಿತಿ ಗತಿಗಳ ಬಗ್ಗೆ ಚರ್ಚೆಯಾಯಿತು. ಹಿಂದುಳಿದ ಜಾತಿ / ಜನಾಂಗದವರು 19ನೇ ಶತಮಾನದ ಪ್ರಾರಂಭದಿಂದಲೇ ಜಾಗೃತರಾಗಿದ್ದರು. ಅಸ್ಪೃಶ್ಯರ ಬಗ್ಗೆ ಕಾಳಜಿಯಿದ್ದ ಸಿ.ಆರ್. ರೆಡ್ಡಿಯವರು ವಿದ್ಯಾಭ್ಯಾಸ ಇಲಾಖೆಯ ಮುಖ್ಯಸ್ಥರಾಗಿದ್ದಾಗ ಅಸ್ಪೃಶ್ಯ ಮಕ್ಕಳಿಗೆ ಶಾಲೆಗೆ ಪ್ರವೇಶ ದೊರಕಿಸುವ ಆಜ್ಞೆ ಹೊರಡಿಸಿದರು. ಇದರಿಂದ ವಿದ್ಯಾಭ್ಯಾಸ ದೊರೆಯಲು ಪ್ರಾರಂಭವಾಯಿತು. 1920ರಲ್ಲಿ ಕೆಲವು ಉದಾರವಾದಿ ಬ್ರಾಹ್ಮಣರು ಅಸ್ಪೃಶ್ಯರನ್ನು ಸಂಘಟಿಸಲು ತೊಡಗಿದರು. ಇದಕ್ಕೆ ಕಾರಣ ಏನೇ ಇರಲಿ, ಇದು ಎಲ್ಲಾ ಬುದ್ಧಿಜೀವಿಗಳು, ಲೇಖಕರ ಮೇಲೆ ಪ್ರಭಾವ ಬೀರಿತು. ಪುಣೆ ಒಪ್ಪಂದದ ಪ್ರಕಾರ ಸರ್ಕಾರದಲ್ಲಿ ಪ್ರಾತಿನಿಧ್ಯ ಬೇಕೆಂದು 1938ರಲ್ಲಿ ಶ್ರೀ ಮಾದಯ್ಯ ಎಂಬುವರು ಸರ್ಕಾರಕ್ಕೆ ಮನವಿ ಸಲ್ಲಿಸಿದರು. ಇದು ಮೈಸೂರು ರಾಜ್ಯದಲ್ಲಿ ಭಾರೀ ಸುದ್ದಿಯಾಯಿತು. ಇದರ ಜೊತೆಗೆ 1920ರಲ್ಲಿ ಮೈಸೂರಿನಲ್ಲಿ ಅಸ್ಪೃಶ್ಯರ ಸಮಾವೇಶ ನಡೆಯಿತು. ಆ ಸಮಾವೇಶಕ್ಕೆ ಅಂಬೇಡ್ಕರ್ ಅವರು ಬರಬೇಕಾಗಿತ್ತು. ಅವರು ಬರದೇ ಹೋದರೂ ಈ ಸಮಾವೇಶ ಕನ್ನಡ ಲೇಖಕರ ಮೇಲೆ ಪ್ರಭಾವ ಬೀರಿದ್ದಂತೂ ಸತ್ಯ. ಆದ್ದರಿಂದಲೇ ಆಗಿನ ಲೇಖಕರು ಜಾತಿ ಪದ್ಧತಿ ವಿರೋಧಿ ಕವಿತೆಗಳನ್ನು, ಕತೆಗಳನ್ನು ಬರೆದಿದ್ದಾರೆ.

ಅಂಬೇಡ್ಕರ್ ಅವರು 'ಸಂಸ್ಕೃತಿ' ಎಂಬ ಪದವನ್ನು ಅರ್ಥೈಸಿಕೊಂಡಿರುವುದು ಹೊಣೆಗಾರಿಕೆ, ಜವಾಬ್ದಾರಿ, ಸಮಾನತೆ, ಸೋದರತ್ವ, ಸಹಬಾಳ್ವೆ ಎಂಬ ನೆಲೆಗಳಲ್ಲಿ. 'ಮಾನವ ನಿರ್ಮಿತ ಪರಿಸರವೇ ಸಂಸ್ಕೃತಿ' ಎಂಬ ಮಾನವಶಾಸ್ತ್ರಜ್ಞರ ವ್ಯಾಖ್ಯಾನದ ಸಮೀಪಕ್ಕೆ ಅಂಬೇಡ್ಕರ್ ಅವರ 'ಸಂಸ್ಕೃತಿ' ನಿರ್ವಚನ ಬರುತ್ತದೆ. ಧರ್ಮ, ಕಲೆ, ಸಾಹಿತ್ಯ, ವಿಜ್ಞಾನ, ಆರ್ಥಿಕತೆ, ರಾಜಕೀಯ, ಸಮಾಜ, ಯಂತ್ರೋಪಕರಣಗಳು, ಆಚರಣೆಗಳು, ಆಚಾರ–ವಿಚಾರಗಳು, ವರ್ತನೆಗಳು, ಮನುಷ್ಯ ಮನುಷ್ಯರ ಸಂಬಂಧಗಳು– ಎಲ್ಲವೂ ಸಂಸ್ಕೃತಿಯ ಕಕ್ಷೆಯೊಳಗೆ ಬರುತ್ತವೆ. ಅಂಬೇಡ್ಕರ್ ಅವರು ಧರ್ಮದ ಬಗ್ಗೆ ಚರ್ಚಿಸುವಾಗ ಹೇಳುವ ಮಾತುಗಳು ಅಸ್ಪೃಶ್ಯತೆ ಮತ್ತು ಗುಲಾಮಗಿರಿಯ ಬಗ್ಗೆ ನಡೆಸುವ ಚಿಂತನೆಗಳು, ಶೂದ್ರ, ಅಸ್ಪೃಶ್ಯರು ಜಾತಿಯ ಹುಟ್ಟು ಬೆಳವಣಿಗೆ ಇತ್ಯಾದಿಗಳ ಬಗ್ಗೆ ಚಿಂತಿಸುವಾಗ ಮಂಡಿಸುವ ವಿಚಾರಗಳು, ಹೇಗೆ ಸಂಸ್ಕೃತಿಯು ಭಾರತದಲ್ಲಿ ಅಸಮಾನತೆಯನ್ನುಂಟು ಮಾಡಿ ಮನುಷ್ಯನನ್ನು ಮನುಷ್ಯನನ್ನಾಗಿ ನೋಡದೆ ಇರುವಂತಹ ಸ್ಥಿತಿಗೆ ತಂದು ನಿಲ್ಲಿಸಿದೆ. ಎಂಬುದನ್ನು